ಎಲ್ಲರದೂ ನಿರ್ಧಾರ' ಅಂದವ ಕೈ ಕಟ್ಟಿಕೊಂಡು, ಬೇರೆ ಮಾತು ಬೇಡ ಅನ್ನುವಂತೆ ಮೌನವಾಗಿ ಕುಳಿತ.

ಬಿಕಾನೇರಿ, ಚದುರಂಗದಾಟದಲ್ಲಿ ಎದುರಾಳಿಯ ನಡೆಯ ಅವಕಾಶಗಳನ್ನು ನಿಯಂತ್ರಿಸುತ್ತ ಹೋಗುತ್ತಲಿದ್ದ. ಭಲೆ! ಅನಿಸಿತು ದೇಶ್ವಂತರಿಗೆ. ಅಂದರೆ ಈ ಕಟ್ಟಡದಲ್ಲಿ ನಾಲ್ಕು ಪಾಲಾದರೆ ಮೂರು ಪಾಲು ಇವರದು. ಅದನ್ನ ಬಿಕಾನೇರಿ ಕಂಪನಿಗೆ ಕೊಟ್ಟುಬಿಡತಾರೆ. ಆಗ, ತಾವು ಕಾಲುಭಾಗವನ್ನು ಕೊಡದೆ ವಿಧಿಯಿಲ್ಲ. ತಮ್ಮನ್ನು ಕಾಲು ಕಟ್ಟಿ ಅಡ್ಡಡ್ಡ ಕೆಡವಿದಂತೆ! ತೀವ್ರ ಅಭಿಮಾನ ಭಂಗದ ಅನುಭವವಾಗಿ, ಎದೆಯಲ್ಲಿ ನೋವಿನ ಚುಳುಕು ಕಾಣಿಸಿಕೊಂಡಿತು. ತೋರಿಸಿಕೊಳ್ಳದೇ ನಿಧಾನವಾಗಿ ಎದ್ದು, ಮೆಟ್ಟು ಹತ್ತಿ ಕೋಣೆಗೆ ಹೋಗಿ ಕುಳಿತರು. ಆನಂದನ ಸೂಕ್ಷ್ಮ ಕಣ್ಣಿಗಿದು ಗೋಚರಿಸಿತ್ತು. 'ದೊಡ್ಡಪ್ಪಾ, ಅಜ್ಜನಿಗೆ ಹುಶಾರು ತಪ್ಪಿದಂತೆ ಕಾಣತದೆ. ಈಗ ಮುಂದುವರೆಸೋದು ಬೇಡ' ಅಂದವ ಮೆಟ್ಟಿನತ್ತ ಧಾವಿಸಿದ. '...ಅದನ್ನೇ ನಾನೂ ಹೇಳತಿರೋದು! ವಯಸ್ಸಾಯ್ತು. ಈಗೇಕೆ ಇಂತದೆಲ್ಲ ಜವಾಬ್ದಾರಿ ಅಂತ?' ಪಾಂಡುರಂಗನ ಮಾತು ಹಿಂಬಾಲಿಸಿತು.

ಕೋಣೆಗೆ ಹೋದ ಆನಂದ 'ಅಜ್ಜಾ, ಏನಾದರು ತ್ರಾಸಾಗತಿದೆಯಾ?' ಕೇಳಿದ ಆತಂಕದಿಂದ. ಉಳಿದವರಿಗೆ ಬೇಡವಾದ, ತಾವಿಬ್ಬರು ವಯಸಾದವರ ಕಾಲು ಸುತ್ತುವ ಈ ಮೊಮ್ಮಗನ ಮೇಲೆ ವಾತ್ಸಲ್ಯ ಉಕ್ಕಿ ಬಂತು. 'ಸಣ್ಣ ನೋವು. ಆದರೇಗಿಲ್ಲ ಮಗೂ...' ಅನ್ನುತ್ತಾ ಅವನ ತಲೆಯ ಮೇಲೆ ಕೈ ಇರಿಸಿದರು. ಡಾಕ್ಟರ ಹತ್ತಿರ ಹೋಗೋಣ ಅಂದರೆ ಈಗೇನು ತೊಂದರೆಯಿಲ್ಲ ಅಂತ ಸಮಾಧಾನಿಸಿದರು. ಹಿಂದೆಂದೂ ಅಜ್ಜನ ಕಣ್ಣಲ್ಲಿ ನೀರು ಕಂಡಿರದ ಆನಂದನಿಗೆ ಕರುಳಲ್ಲಿ ಚೂರಿಯಾಡಿಸಿದಂತಾಯಿತು. ಭಾವನೆಯನ್ನು ತೋರಿಸಿಕೊಳ್ಳದೆ ಕೆಳಗಿಳಿದು ಬಂದ. ಮನೆಯಿಂದ ಹೊರಬಿದ್ದವನ ಕಾಲು ಅರಿವಿಲ್ಲದೇ ಮನೆಯ ಪಕ್ಕಕ್ಕೆ ನಡೆಯಿತು. ಬಾಗಿಲು ತಳ್ಳಿ, ಒಳಹೋದ. ಚಂದನಿಕಾ ಶಾಲೆಯಿಂದ ಈಗಷ್ಟೆ ಬಂದು, ಬಟ್ಟೆ ಬದಲಾಯಿಸಿ, ವಿದ್ಯಾರ್ಥಿಗಳು ಬರೆದಿದ್ದನ್ನು ತಿದ್ದುತ್ತ ಕುಳಿತವಳು ಅವನ ತಳಮಳದಲ್ಲಿ ಕುದಿಯುವ ಮುಖ ನೋಡಿ ಎದ್ದಳು. 'ಅಮ್ಮ ನಿಮ್ಮನೆಗೇ ಈಗ ಹೋದಳು' ಅಂದಳು. ಆನಂದ ಅದನೊಂದೂ ಕೇಳಿಸಿಕೊಳ್ಳದವನಂತೆ ಹೋಗಿ ಅವಳನ್ನು ಕೂಡಿಸಿ, ಅವಳೆದೆಯಲ್ಲಿ ಮುಖವನ್ನು ಹುದುಗಿಸಿಕೊಂಡು ಕುಳಿತುಬಿಟ್ಟ. ಅವಳಿಗೆ, ಮನೆಯಲ್ಲಿ ನಡೆಯುತ್ತಿರುವ ಸಮಸ್ಯೆಯ ಅರಿವಿತ್ತು. ಮಾತಾಡದೆ ಆನಂದನ ತಲೆಯ ಸುತ್ತ ತೋಳುಗಳಿಂದ ಬಳಸಿ ಎದೆಗೊತ್ತಿಕೊಂಡು ಮೌನವಾಗಿ ಕುಳಿತಳು. ಅವಳೆದೆಯ ಲಯಬದ್ಧ ಮಿಡಿತ, ಧಗ್ ತಕ್... ಧಗ್ ತಕ್... ಧಗ್ ತಕ್... ಧಗ್ ತಕ್... ಜೀವ ಜಗತ್ತನ್ನು ಸದಾ ಸಲಹುವ ಲಯ, ಕೆನ್ನೆಯನ್ನು ಮೆತ್ತಗೆ ತಟ್ಟುತ್ತಿದೆ. ಚಿಕ್ಕಂದಿನಲ್ಲಿ ಜ್ವರ ಬಂದಾಗ ಅಮ್ಮ ಮಲಗಿಸಿಕೊಂಡು ತಟ್ಟಿ ಸಂತೈಸುತ್ತಿರುವ ಹಾಗೆ... ಲಯದೊಡನೆ ಭದ್ರತೆಯ ಆಶ್ವಾಸನೆಯೊಂದು, ಅವಳಿಂದ ತನ್ನ ಮಿದುಳಿಗೆ ಹರಿ ಹರಿದು ಬರುತ್ತಿರುವ ಅನುಭವದಲ್ಲಿ ಮನಸು ಶಾಂತವಾಗತೊಡಗಿತು. ಐದು ನಿಮಿಷವಾಗಿತ್ತು. ಮೊಬೈಲು ಸದ್ದು ಮಾಡತೊಡಗಿತು. ಅವಳೆ ತಡಕಾಡಿ ಅವನ ಟ್ರಾಕ್‌ಪ್ಯಾಂಟಿನ ಕಿಸೆಯಲ್ಲಿದ್ದ ಮೊಬೈಲು ತೆಗೆದು, 'ಮಾತಾಡಿ' ಅಂದಳು ಮೆತ್ತಗೆ. ಮುಖವೆತ್ತಿದವ ಮೊಬೈಲ್ ನೋಡಿದ. ಸೀಮಂತಿನಿ ಕರೆ ಮಾಡಿದ್ದಳು. 'ಹೇಳು ಸೀಮಂತಿನಿ' ಅಂದುದು ಕೇಳಿ, ಅಲ್ಲಿಂದೇಳಲು ಹವಣಿಸಿದ ಚಂದನಿಕಾಳನ್ನು ಕೈ ಹಿಡಿದು ತಡೆದ. 'ಅಲ್ಲಿ ಯಾವುದೋ ಕಾರ್ಪೊರೇಟ್ ಕಂಪನಿ ನಿಮ್ಮನೆಯನ್ನು ಖರೀದಿಗೆ ಕೊಡಿ ಅಂತಾ ಒತ್ತಾಯಿಸ್ತಾ ಇದೆಯಂತೆ? ಇದ್ಯಾವ ಭಂಡತನ ಆನಂದ್? ನಿನ್ನ ತಂದೆ ಅದನ್ನ ಕೆಡವಿಸೋಣ ಅಂತ ಸಲಹೆ ಕೊಡತಿದಾರಂತೆ ಹೌದಾ? ಗೊತ್ತಾಗಿ ಆಶ್ಚರ್ಯವಾಯ್ತು. ನಿಂಗಿದರಿಂದ ಎಷ್ಟು ಹಿಂಸೆಯಾಗಿರಬೇಕಂತ ಅರ್ಥವಾಗತಿದೆ. ಒಂದು ಮಾತು ಹೇಳಲಾ ಆನಂದ್? ನೀನಿದೆಲ್ಲ ಕರಕರೆ ಹಚ್ಚಿಕೊಂಡು ಅಲ್ಯಾಕೆ ಒದ್ದಾಡಬೇಕು? ಇದೆಲ್ಲ ಬೇಕಾ? ಓದಿಕೊಂಡಿದೀಯ, ವಯಸ್ಸಿದೆ. ನಾನು ಹೇಳಿದ್ದು ಏನು ಮಾಡಿದೆ? ಈ ವರ್ಷ ನನ್ನ ಥೀಸಿಸ್ ಸಬ್‌ಮಿಟ್ ಮಾಡತೇನೆ, ಬಂದುಬಿಡೋ' ಅಂದಳು.

'ಸೀಮಂತಿನೀ, ಅಜ್ಜ ಅಜ್ಜಿಗೆ ಯಾವಾಗಿನಕಿಂತ ಜಾಸ್ತಿ ನನ್ನ ಅವಶ್ಯಕತೆ ಇದೆ. ಹೇಗೆ ಬಿಟ್ಟು ಬರಲಿ? ಮೇಲಿಂದ, ನಂಗೆ ಮೊದಲಿಂದಲೂ ಈ ಜೀವನ ಇಷ್ಟ, ನಿಂಗೊತ್ತು.'

'ಅದೆಲ್ಲ ಸರೀನೋ. ಆದರೆ, ನೀನೀಗ ಅನುಭವಿಸ್ತಾ ಇದೀಯಲ್ಲ, ಅದು ನನ್ನ ಚಿಂತೆ! ನಿನ್ನ ಬೆಂಬಲಕ್ಕೆ ನಾನಿದ್ದೇನೆ, ಮರೀಬೇಡ. ಈಗೆಲ್ಲಿದೀಯ... ತೋಟದಲ್ಲೋ ಮನೇಲೋ?'

'ತೋಟದಲ್ಲಲ್ಲ. ತಲೆನೋವಿಗೆ ಚಂದನಿಕಾ ಔಷಧ ಮಾಡತಿದಾಳೆ. ಅಲ್ಲಿದೇನೆ' ಅಂದ.

'ಓಹ್! ಹೌದಾ? ಮನೆಯಲ್ಲಿ ಶಾಂತಿಯಿಲ್ಲವಾದರೆ ತಲೆನೋವು ಬರೋದೆ ಮತ್ತೆ! ಅದಕ್ಕೇ ಹೇಳಿದ್ದು, ಬಂದುಬಿಡು ಅಂತಾ. ನಿರ್ಣಯ ತಗೋಬೇಕು ನೀನು ಅಷ್ಟೇ. ಫೋನು ಮಾಡತಿರು' ಅಂತ ಮಾತು ಮುಗಿಸಿದಳು.

ಚಂದನಿಕಾಳ ಮುಖ ಕೆಂಪಾಗಿತ್ತು. 'ತಲೆನೋವಂತೆ ತಲೆನೋವು! ನನ್ನ ಹತ್ತಿರ ಇದ್ದೀರಂತ ಅವಳಿಗೆ ಹೇಳಲೇಬೇಕಿತ್ತಾ?'

'ಅವಳೆ ತಲೆನೋವು. ನೀನದಕ್ಕೆ ಔಷಧ ಅಲ್ವಾ ಹೇಳು ಮತ್ತೆ? ಗೊತ್ತಾಗಲಿ ಬಿಡೇ' ಕಿರುನಗು ಅರಳಿಸಿದವ, ದೊಡ್ಡಪ್ಪ ಏನಾದ ನೋಡತೇನೆ ಅಂತ ಮನೆಗೆ ಹೊರಟ. ಪಾಂಡುರಂಗ ಎಷ್ಟೋ ಹೊತ್ತಿಂದ ಹಜಾರದಲ್ಲಿ ಒಬ್ಬನೇ ಕುಳಿತಿದ್ದ. ಇವನನ್ನು ಕಂಡವ 'ನೋಡೋ, ನಾನು ಹೇಳಿದ್ದು ನಿಮಗೆಲ್ಲ ಕೆಟ್ಟದಾಗಿ ಅನಿಸಿರಬಹುದು. ಆದರೆ, ನಮಗೆಲ್ಲರಿಗೂ ಸೇರಿದ ಸಂಗತಿಯಿದು ಅನ್ನೋದು ಸತ್ಯ ಅಲ್ಲವಾ? ನನ್ನ ಸ್ಥಾನದಲ್ಲಿ ನೀನಿದ್ರು ಇದನ್ನೆ ಮಾಡತಿದ್ದೆ. ಆಧುನಿಕ ಮನೋಭಾವ ಬೆಳೆಸಿಕೋಬೇಕು. ಮುಂದಾದರು ಇಲ್ಲಿ ನಡೆಯೋದನ್ನೆಲ್ಲಾ ನಮಗೆ ತಿಳಿಸಿ ಮುಂದುವರಿಯಲು ನೀನಾದರೂ ಹೇಳು. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೋಬಾರದು ಅಂತ ಅಪ್ಪನೆ ಹೇಳತಿದ್ದ ಗಾದೆ. ಮಾಡಿದ್ದೇನು?' ಅಂದ. ಊಟವಾದ ಕೂಡಲೆ ಹೊರಟುಬಿಟ್ಟ. ದೇಶ್ವಂತರ ಆರೋಗ್ಯ ವಿಚಾರಿಸುವ ಸೌಹಾರ್ದವನ್ನೂ ತೋರಿಸಲಿಲ್ಲ.

***

ಜನಪ್ರಿಯ ಪತ್ರಿಕೆಯೊಂದರಲ್ಲಿ ಚಿಂತಕರೊಬ್ಬರ ಲೇಖನವೊಂದು ಪ್ರಕಟವಾಯಿತು. ರಾಜ್ಯದಲ್ಲಿ ಹಲವಾರು ಐತಿಹಾಸಿಕ ಕಟ್ಟಡಗಳಿರುವುದನ್ನು ಪ್ರಸ್ತಾಪಿಸಿದ ನಂತರ, ಈ ಭವನವನ್ನು ಗುರಿಯಾಗಿರಿಸಿಕೊಂಡು ಅದು ಮುಂದುವರಿದಿತ್ತು. ಇತಿಹಾಸವನ್ನು ಬಿಚ್ಚಿಡುವ ಅಮೂಲ್ಯ ಆಸ್ತಿ ಇದಾಗಿದ್ದು, ವಿದೇಶದಲ್ಲಿದ್ದರೆ ಪ್ರವಾಸಿ ಆಕರ್ಷಣೆಯಾಗಿರುತ್ತಿತ್ತು. ನಮ್ಮಲ್ಲಿ ಸಮರ್ಪಕವಾದ ಕಾನೂನಿಲ್ಲ. ಖಾಸಗಿ ಹಕ್ಕಲ್ಲಿದ್ದಾಕ್ಷಣ, ಐತಿಹಾಸಿಕ ಮಹತ್ವದವು ಸಮಾಜಕ್ಕೂ ಸೇರಿದ್ದು ಅನ್ನುವುದನ್ನು ಅಲ್ಲಗಳೆಯುವಂತಿಲ್ಲ. ಅದರ ಮಹತ್ತು ಕೇವಲ ಒಬ್ಬರಿಂದ ಬಂದಿರುವುದಲ್ಲ. ಮಾಲೀಕರೆನಿಸಿಕೊಂಡವರ ಕೈಯಲ್ಲಿ ಸಿಕ್ಕಿಕೊಂಡು ಯಾವಾಗ ಕೆಡವಲ್ಪಟ್ಟು ಸಿಮೆಂಟ್ ಕಟ್ಟಡ ಎದ್ದುಬಿಡತದೊ ಗೊತ್ತಾಗುವುದಿಲ್ಲ. ಪುರಾತತ್ವ ಇಲಾಖೆಯಲ್ಲಿ ಸರಿಯಾದ ಕಾನೂನು ತಂದು ಅದನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಬೇಕು ಅಂತ ಬರೆದಿದ್ದರು.

ಮರುದಿನ ಚುಕ್ಕಿ ಅದಕ್ಕೆ ಉತ್ತರವಾಗಿ ಲೇಖನ ಬರೆದಳು. ರಾಜ್ಯದಲ್ಲಿ ಎಷ್ಟೆಷ್ಟು ಐತಿಹಾಸಿಕ ಕೋಟೆ ಕೊತ್ತಳಗಳು, ಅರಮನೆಗಳು, ಶಿಲಾಶಾಸನಗಳಿವೆ ಅಂತ ಲೇಖಕರಿಗೆ ಲೆಕ್ಕವಿದ್ದಂತಿಲ್ಲ. ಇಲಾಖೆಯ ವ್ಯಾಪ್ತಿಯಲ್ಲಿದ್ದರೂ ಹೇಳಕೇಳುವವರಿಲ್ಲದೆ ಹಾಳಾಗುತ್ತಿವೆ. ಬಿಸಿಲಲ್ಲಿ ಕಾದು ಬಿರುಕು ಬಿಡುತ್ತಿವೆ. ಮಳೆಗಾಲದ ಕೆಸರಲ್ಲಿ ಎಷ್ಟೋ ಹುಗಿದೇ ಹೋಗಿವೆ. ಜೂಜಾಡುವವರಿಗೆ, ಅಪರಾಧಿಗಳಿಗೆ ಅಡ್ಡೆಗಳಾಗಿ ಅನಾಥವಾಗಿವೆ. ಅದನ್ನೆಲ್ಲ ಬಿಟ್ಟು, ಪ್ರಜೆಗಳ ಖಾಸಗಿ ಆಸ್ತಿಯನ್ನು ಸರಕಾರಿ ಇಲಾಖೆ ವಶಪಡಿಸಿಕೊಂಡು ಅದನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದೊಂದು ಬಾಕಿಯಿತ್ತು! ಇದರಲ್ಲಿ ಯಾವ ವಿವೇಕವಿದೆ, ಸದುದ್ದೇಶವಿದೆ ಗೊತ್ತಾಗುತ್ತಿಲ್ಲ ಅಂತ ಖಾರವಾಗಿ ಜಾಡಿಸಿದ್ದಳು. ಅದರ ಪರ ವಿರೋಧಿ ಚರ್ಚೆ ಕೆಲಕಾಲ ನಡೆಯಿತು. ಕೆಲವು ಲೇಖನಗಳು ಚುಕ್ಕಿಯ ಬಗ್ಗೆ ವೈಯಕ್ತಿಕ ವಿಷಯವನ್ನೂ ಸೇರಿಸಿಕೊಂಡಿದ್ದವು. ಅದಕ್ಕೆ ಅವಳು ತಲೆಕೆಡಿಸಿಕೊಳ್ಳದೆ ಉಗಿದು ಬರೆದಳು.

ಈ ಪ್ರದೇಶದಲ್ಲಿ ನೋಡುವಂತಹ ಪ್ರವಾಸಿ ಸ್ಥಳಗಳು ಮಾರುಮಾರಿಗಿವೆ. ಉಳಿದುಕೊಳ್ಳಲು ಸರಿಯಾದ ವ್ಯವಸ್ಥೆಯಿಲ್ಲದೆ ಜನ ಬರುತ್ತಿಲ್ಲ. ಒಳ್ಳೇ ಹೋಟೆಲು ತತ್‌ಕ್ಷಣದ ಅವಶ್ಯಕತೆ ಅಂತ ಹೆಸರಾಂತ ಅಂಕಣಕಾರನೊಬ್ಬ ಬರೆದ ಲೇಖನ ಮರುವಾರ ಬಂತು. ಹಿನ್ನೆಲೆ ಅರ್ಥವಾಗಿದ್ದ ಚುಕ್ಕಿ, ಹತ್ತಿರದಲ್ಲಿರುವ ಒಳ್ಳೇ ಹೋಟೆಲುಗಳ ಪಟ್ಟಿಮಾಡಿ, ಇವರು ಹೇಳುವ ಜಾಗದಲ್ಲಿ ಹೋಟೆಲು ಮಾಡಿದರೆ ಆಗುವ ಪರಿಸರನಾಶ, ಶಾಂತತೆಗೆ ಬರುವ ಭಂಗ ಎಲ್ಲಾ ಸೇರಿಸಿ ಬರೆದಳು.

**(ಸಶೇಷ)**